ಬಹಳ ವೈವಿಧ್ಯಮಯರಾಗಿದ್ದಾರೆ ಮತ್ತು ವಿಭಿನ್ನ ಗುಂಪುಗಳ ಜನಸಂಖ್ಯಾ ಬಲದಲ್ಲಿಯೂ ಬಹಳಷ್ಟು ವ್ಯತ್ಯಾಸವಿದೆ. ತಮ್ಮನ್ನು ತಾವು ನೆಲೆಗೊಳಿಸಿಕೊಳ್ಳಲು ಸಾಮಾಜಿಕ ಬಿರುಕುಗಳನ್ನು ನಿರಂತರವಾಗಿ ಬಳಸುವ ರಾಜಕೀಯ ಪಕ್ಷಗಳು ಅದರೊಳಗಿನ ಗುಂಪುಗಳನ್ನು ತಲುಪಲು ಹಾಗೂ ಇತರ ಗುಂಪುಗಳ ವಿರುದ್ಧ ಅವರನ್ನು ಎತ್ತಿಕಟ್ಟಲು ಪ್ರಯತ್ನಿಸಿವೆ. ಅದೇ ಕಾಲಕ್ಕೆ, ವರ್ಷಗಳಿಂದೀಚೆಗೆ, ಮೀಸಲಾತಿಯ ಹಲವಾರು ಪ್ರಯೋಜನಗಳು ದಲಿತರಲ್ಲಿ ಕೆಲವು ಜಾತಿಗಳಿಗೆ ಅವರ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಅಥವಾ ಜನಸಂಖ್ಯಾ ಬಲದಿಂದಾಗಿ ಹೆಚ್ಚು ದೊರೆತಿವೆ. ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ವರ್ಗೀಕರಿಸಲಾಗಿದೆ, ಆದರೆ ಅವುಗಳನ್ನು ಮೈಲಿಗೆಯೆಂದು ಪರಿಗಣಿಸಲಾಗುವುದಿಲ್ಲವಾದ್ದರಿಂದ ಉತ್ತಮ ಸಾಮಾಜಿಕ ಬಂಡವಾಳವನ್ನು ಹೊಂದಿವೆ. ಪರಿಣಾಮವಾಗಿ ಸಾರ್ವಜನಿಕ ಅವಕಾಶಗಳಿಗೆ ಅಸಮಾನ ಪ್ರವೇಶಾಧಿಕಾರವು ಕಣ್ಣುಬೇನೆಯಾಗಿದ್ದು ದಲಿತರೊಳಗಿನ ಜಾತಿ ನಾಯಕರು ಸೇರಿದಂತೆ ಕೆಲವು ಹಿತಾಸಕ್ತಿಗಳಿಂದ ಭುಗಿಲೆದ್ದಿದೆ. ಈ ಪ್ರಕ್ರಿಯೆಯಲ್ಲಿ, ತುಲನಾತ್ಮಕವಾಗಿ ಹೆಚ್ಚು ವಂಚಿತ ಜಾತಿಗಳ ಅನೇಕ ನಾಯಕರು ಚಾಲ್ತಿಯಲ್ಲಿರುವ ಮೀಸಲಾತಿ ಅವಕಾಶಗಳ ಸಮಾನ ವಿತರಣೆಯ ಮೇಲೆ ಕೇಂದ್ರೀಕರಿಸಿದ್ದಾರೆ. ಆದಾಗ್ಯೂ, ಈ ಪ್ರಕ್ರಿಯೆಯಲ್ಲಿ, ಸಾಮಾಜಿಕ ಪರಿವರ್ತನೆಯಂತಹ ಸ್ಥೂಲ ವಿಷಯವನ್ನು ಹಿಂದಕ್ಕೆ ತಳ್ಳಲಾಗಿದೆ.

ನಾನು ಆಂತರಿಕ ಮೀಸಲಾತಿಯನ್ನು ಬೆಂಬಲಿಸುತ್ತೇನೆ. ಈ ಪ್ರಕ್ರಿಯೆಯಲ್ಲಿ, ದಲಿತ ಜಾತಿಗಳ ಏಕತೆಗೆ ಕಂಟಕವಾಗಿರುವ ಪ್ರಮುಖ ಉದ್ರೇಕಕಾರಿ ಅಂಶವೊಂದನ್ನು ನಿವಾರಿಸಿದಂತಾಗುತ್ತದೆ. ಅದೇ ಕಾಲಕ್ಕೆ, ಆಮೂಲಾಗ್ರ ಸಾಮಾಜಿಕ ಪರಿವರ್ತನೆಯಿಲ್ಲದೆ, ದಲಿತರಲ್ಲಿ ಬಹುಪಾಲು ಜನರು ಆಶಿಸಲು ಹೆಚ್ಚೇನೂ ಉಳಿದಿಲ್ಲ ಎಂಬುದನ್ನು ದಲಿತ ನಾಯಕತ್ವವು ಎತ್ತಿ ತೋರಿಸಬೇಕಾಗಿದೆ. ಅಲ್ಲಿಯವರೆಗೆ, ಮೀಸಲಾತಿಯು ದಲಿತರನ್ನು ಪ್ರಬಲ ವ್ಯವಸ್ಥೆಯ ಒಟ್ಟಿಗೆ ಒಗ್ಗೂಡಿಸುವ ಸಾಧನವಾಗಿಯಷ್ಟೇ ಉಳಿಯಲಿದೆ. ಭಾರತೀಯ ಸಾಂವಿಧಾನಿಕತೆಗೆ ಅವಿಭಾಜ್ಯವಾಗಿರುವ ಈ ಸಾಧನವನ್ನು ತಿರಸ್ಕರಿಸಲಾಗದೇ ಹೋದಂತಹ ಪಕ್ಷದಲ್ಲಿ, ದಲಿತರು ಆರ್ಥಿಕ ಮತ್ತು ಸಾಮಾಜಿಕ ಎರಡೂ ನೆಲೆಗಳಲ್ಲಿ ವಿಶಾಲ ಮತ್ತು ಹೆಚ್ಚು ಸಮಗ್ರ ಸುಧಾರಣೆಗಳಿಗಾಗಿ ತಮ್ಮನ್ನು ತಾವು ಒಟ್ಟುಗೂಡಿಸಿಕೊಳ್ಳಬೇಕು. ಅಂತಹ ಯೋಜನೆಯನ್ನು ಮುಂದುವರಿಸಲು ದಲಿತ ಏಕತೆ ಅತ್ಯಗತ್ಯ.

**◆ ತಾವು ಇತ್ತೀಚೆಗೆ 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದಿದ್ದೀರಿ. ಅದಕ್ಕಾಗಿ ಅಭಿನಂದನೆಗಳು. ಅಂಬೇಡ್ಕರ್‌ರವರ ಬೌದ್ಧಮತದೊಂದಿಗೆ ಆಳವಾಗಿ ತೊಡಗಿಸಿಕೊಂಡಿರುವ ಕೆಲವೇ ವಿದ್ವಾಂಸರಲ್ಲಿ ನೀವು ಒಬ್ಬರು. ನಿಮ್ಮ ಉಪನ್ಯಾಸಗಳು ಮತ್ತು ಬರಹಗಳು ಅವರ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಯ ವಿಶಾಲ ಚೌಕಟ್ಟಿನೊಳಗೆ, ವಿಶೇಷವಾಗಿ ಜಾತಿ ದಬ್ಬಾಳಿಕೆಯ ವಿರುದ್ಧದ ಹೋರಾಟ ಮತ್ತು ಹೆಚ್ಚು ಸಮಾನ ಸಮಾಜಕ್ಕಾಗಿ ಅವರ ದೃಷ್ಟಿಕೋನದೊಳಗೆ ಅವರ ಮತಾಂತರವನ್ನು ಅರ್ಥ ಮಾಡಿಕೊಳ್ಳುವ ಮಹತ್ವವನ್ನು ಒತ್ತಿ ಹೇಳುತ್ತವೆ. ಆದಾಗ್ಯೂ, ಕೆನಡಾ ಮತ್ತು ಭಾರತದಲ್ಲಿ ವಾಸಿಸುವ ಮಹಾರಾಷ್ಟ್ರದ ಬೌದ್ಧರೊಂದಿಗಿನ ನನ್ನ ಒಡನಾಟದಲ್ಲಿ, ಅಂಬೇಡ್ಕರ್‌ರವರ ಬೌದ್ಧಮತವು ಅವರು ವಿರುದ್ಧ ಹೋರಾಡಿದ ಜಾತಿ ಗುರುತಾಗಿ ವಿಕಸನಗೊಂಡಂತೆ ಕಾಣುತ್ತದೆ ಎಂದು ನಾನು ಗಮನಿಸಿದ್ದೇನೆ. ಅಂಬೇಡ್ಕರ್‌ರವರು ನಾಯಕನ ಆರಾಧನೆಯ ವಿರುದ್ಧ ಬಲವಾಗಿ ಎಚ್ಚರಿಸಿದ್ದರು. ಆದರೆ, ಅವರ ಜನ್ಮದಿನದಂದು, ಹಿಂದೂ ದೇವತಾರಾಧನೆಯನ್ನು ನೆನಪಿಸುವ ರೀತಿಯಲ್ಲಿ ಜನರು ಅವರನ್ನು ಪೂಜಿಸುವುದನ್ನು ನಾನು ನೋಡಿದ್ದೇನೆ. ಈ ವಿದ್ಯಮಾನವು ಅಂಬೇಡ್ಕರ್‌ರವರ ಬೋಧನೆಗಳಿಗೆ ಸವಾಲನ್ನು ಒಡ್ಡಿದಾಗ ನೀವು ಅದನ್ನು ಹೇಗೆ ಅರ್ಥೈಸುತ್ತೀರಿ?**

2025ರ 'ಬೋಧಿವೃಕ್ಷ' ಪ್ರಶಸ್ತಿಯನ್ನು ಸ್ವೀಕರಿಸಲು ನನಗೆ ಸಂತೋಷವಾಯಿತು. ನನಗೆ ಪ್ರಶಸ್ತಿಯನ್ನು ನೀಡಿದ ಸ್ಫೂರ್ತಿಧಾಮದ ಬಗ್ಗೆ, ಅದು ನಡೆಸುವ ಚಟುವಟಿಕೆಗಳ ಪ್ರಕಾರ ಮತ್ತು ಅದರೊಂದಿಗೆ ನಿಕಟ